# ಉದ್ಯಮೀಕರಣ ಮತ್ತು ಹಳ್ಳಿಗಳ ಅಭಿವೃದ್ಧಿ *

ಸ್ವಾತಂತ್ರ್ಯ ಬಂದ ಬಳಿಕ ಕಾರ್ಖಾನೆಗಳು ಅಥವಾ ಯೋಜನಾಕಾರ್ಯಗಳು ಶುರುವಾದ ಹಳ್ಳಿಗಳಲ್ಲಿ ಔದ್ಯೋಗೀಕರಣದ ಉತ್ಸರ್ಗದ ಪರಿಣಾಮವು ವಿಶೇಷವಾಗಿ ನೋವಿನಿಂದ ಕೂಡಿದೆ. ಹೀಗೆ ಶುರುವಾದ ಕಾರ್ಖಾನೆಗಳು ಖಾಸಗೀ ಅಥವಾ ಸಾರ್ವಜನಿಕ ಅಥವಾ ಸಹಕಾರೀ ಒಡೆತನಕ್ಕೆ ಸೇರಿದ್ದವಾದರೂ ಆಡಳಿತ ವರ್ಗಗಳೇ ಆಗಲಿ ಕೇಂದ್ರ ಅಥವಾ ರಾಜ್ಯಸರಕಾರಗಳೇ ಆಗಲಿ ಹಳ್ಳಿಗಾಡಿನಲ್ಲಿ ಉದ್ಯಮವನ್ನು ಆರಂಭಿಸುವುದರಿಂದ ಉಂಟಾಗುವ ಸಮಸ್ಯೆಗಳನ್ನು ಎದುರಿಸಲು ಯಾವ ಮಾರ್ಗ ನಿರ್ದೇಶನಗಳನ್ನೂ ಹೊಂದಿರಲಿಲ್ಲ. ಕಾರ್ಖಾನೆದಾರರು, ಉದ್ಯಮಿಗಳು ಅಥವಾ ಅಧಿಕಾರಿಗಳು ಹಳ್ಳಿಗಾಡುಗಳಿಗೆ ಒಂದು ಪರಕೀಯ ನಾಗರಿಕತೆಯ ಬಾವುಟ ಹಿಡಿದವರಂತೆ ವಸಾಹತುಗಳನ್ನು ನಿರ್ಮಿಸುವ ಮನೋಭಾವದೊಡನೆ ಪ್ರವೇಶಿಸಿದ ಹಾಗೆ ಕಾಣುತ್ತದೆ. ಅವರಿಗೆ ಹಳ್ಳಿಗಾಡಿನ ಜನತೆಯ ಬಗ್ಗೆ ಸಹಾನುಭೂತಿ ಅಥವಾ ಮಮತೆ ಇರಲೇ ಇಲ್ಲ. ಈ ಪ್ರಕ್ರಿಯೆಯು ಒಂದು ಕಡೆ ಆಧುನಿಕ ಸತ್ತೆಯ ಸಲಕರಣೆಗಳ ಬೆಂಬಲ ಹೊಂದಿದ್ದ ಉದ್ಯಮಿಗಳೂ ಮತ್ತೊಂದು ಕಡೆ ಹಳ್ಳಿಗಾಡಿನ ಅಸಂಘಟಿತ ಬಡವರೂ ಇದ್ದಂತಹ ಮುಖಾಮುಖಿಯಾಗಿತ್ತು.

ಬಡತನದಲ್ಲಿದ್ದ ಹಳ್ಳಿಗಾಡಿನ ಜನರು ಹೊಸಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ ಹೊಂದದೇ ಇದ್ದ ಕಾರಣ ಅವರ ಸಂದರ್ಭದಲ್ಲಿ ಹಳೆಯ ಶೋಷಣಾಕ್ರಮಗಳಿಗೆ ಕೆಲವು ಹೊಸ ವಿಧಾನಗಳು ಸೇರಿಕೊಂಡಂತಾಯ್ತು. ಇಂತಹ ಸಮಸ್ಯೆಯನ್ನು ಬಿಡಿಸುವ ಅಗತ್ಯದ ಬಗ್ಗೆ ಸರಕಾರಗಳು ಮತ್ತು ಉತ್ಸಾಹಿ ಉದ್ಯಮಿಗಳು ಯಾವ ಕಳಕಳಿಯನ್ನೂ ಹೊಂದಿರಲಿಲ್ಲ. ಏಕೆಂದರೆ ಉದ್ಯಮಿಗಳು ತಮ್ಮ ಪ್ರಯತ್ನವು ತಾವು ಆರಂಭಿಸುವ ಉದ್ದಿಮೆಯ ಹಂದರದಮೇಲೆ ಸಂಯೋಜಿತ ಪ್ರದೇಶಾಭಿವೃದ್ಧಿಯ ದಿಕ್ಕಿನಲ್ಲಿರಬೇಕೆಂದು ಯೋಚಿಸದೆ ತಾವು ಹಿಂದುಳಿದ ಪ್ರದೇಶದಲ್ಲಿ ಒಂದು ಆಧುನಿಕ ಶಿಬಿರವನ್ನು ಕಟ್ಟುವವರು ಎಂದು ಪರಿಗಣಿಸಿದರು. ಕೆಲಸಗಾರರ ಸಂಘಟನೆ

* ಕೇಂದ್ರ ಉದ್ಯಮ ಸಚಿವರು 1978 ರಲ್ಲಿ ರಚಿಸಿದ್ದ ಕೇಂದ್ರ ಕಾರ್ಮಿಕ ಸಂಘಗಳ ಸಮಿತಿಯ ಅವಗಾಹನೆಗೆ ಸಿದ್ಧಪಡಿಸಲಾದ ಪ್ರಬಂಧ.

ಗಳು ತಮ್ಮ ಸಂಘಟನೆಯ ಪ್ರಚ್ಛನ್ನ ಅಥವಾ ನಿಜವಾದ ಬಲವನ್ನು ಹೊಂದಿದ್ದರೂ ಅವರನ್ನು ಉದ್ಯಮೀಕರಣದ ಕ್ರಮದಲ್ಲಿ ತೊಡಗಿಸಿಕೊಳ್ಳದಿದ್ದ ಮೇಲೆ ಸಂಕಟಕರವಾಗಿ ಛಿದ್ರಗೊಂಡಿರುವ ಹಳ್ಳಿಗಾಡಿನ ಅಸಂಘಟಿತ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಸಮಸ್ಯೆಗಳನ್ನು ಪರಿಹರಿಸುವ ಮಾತು ದೂರವೇ ಉಳಿಯಿತು. ಹೀಗಾಗಿ ಮೊದಲಿನಿಂದಲೂ ಹಳ್ಳಿಗಾಡಿನ ಜನತೆ ಒಂದು ವಿಷಮ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಏಕೆಂದರೆ, ಅವರು, ದುರ್ಬಲರಾಗಿದ್ದ ತಮ್ಮ ಮೇಲೆ ಉಂಟಾಗುವ ಪರಿಣಾಮಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ತಮ್ಮದೇ ಗುರಿಗಳೆಡೆಗೆ ಮುನ್ನುಗ್ಗುತ್ತಿದ್ದ ಸಂಪೂರ್ಣವಾಗಿ ಪರಕೀಯ ಮತ್ತು ಶಕ್ತಿಯುತರಾಗಿದ್ದ ಜನರನ್ನು ಮತ್ತು ಶಕ್ತಿಗಳನ್ನು ಎದುರಿಸಬೇಕಾಗಿ ಬಂತು.

ಹಳ್ಳಿಗಾಡಿನಲ್ಲಿ ಉದ್ಯಮವನ್ನು ಆರಂಭಿಸುವುದರ ಮೊದಲ ಹೆಜ್ಜೆ ವಿಶಾಲವಾದ ಭೂ ಪ್ರದೇಶಗಳನ್ನು ವಶಕ್ಕೆ ತೆಗೆದುಕೊಳ್ಳುವ ಮೂಲಕ ರೈತಾಪಿ ಜನರ ಬೇರು ಕಿತ್ತುವುದು. ತನ್ನ ಮುಚ್ಚು ಮುಸುಗಿನ ನಡಾವಳಿ ಮತ್ತು ಜನ ವಿರೋಧಿ ಮನೋಭಾವಕ್ಕೆ ಹೆಸರಾದ ರೆವಿನ್ಯೂ ಇಲಾಖೆಯ ಆಡಳಿತಶಾಹಿಯು ಇದು ಕೇವಲ ಕಾರ್ಯವಿಧಾನ ಮತ್ತು ನಡವಳಿಕೆಯ ಪ್ರಶ್ನೆ, ತೀವ್ರವಾದ ಮಾನವೀಯ ಸಮಸ್ಯೆಯಲ್ಲ ಎಂದು ತೀರ್ಮಾನಿಸಿತು. ಆಕ್ರಮಿಸಲ್ಪಟ್ಟ ಭೂಮಿಗೆ ಕೊಡಬೇಕಾದ ಪರಿಹಾರ ದರವನ್ನು ತನ್ನ ಮನಸ್ಸಿಗೆ ಹೊಳೆದಂತೆ ನಿರ್ಧರಿಸಿತು. ಜನರಿಗೆ ಅರ್ಥವಾಗದ ಇಂಗ್ಲಿಷ್ ಭಾಷೆಯಲ್ಲಿದ್ದ ಈ ನಡವಳಿಕೆಗಳು ಕೊನೆಯಿಲ್ಲದ ವಿಳಂಬದಿಂದ ಬಾಧಿಸಲ್ಪಟ್ಟವು. ಭೂಮಿಕಳೆದುಕೊಂಡವರಿಗೆ ಹಣ ಕೈ ಸೇರುವುದು ತಡವಾಯಿತು. ಈ ನಡವಳಿಕೆ ಮೊದಲಾದಾಗಿನಿಂದ ಉದ್ಯಮ ಅಥವಾ ಯೋಜನಾಕಾರ್ಯ ಶುರುವಾಗುವವರೆಗೆ ರೈತರು ಬೆಳೆ ತೆಗೆಯುವುದಕ್ಕೆ ಅವಕಾಶ ಸಿಗಲಿಲ್ಲ. ಆಸುಪಾಸಿನ ಜಮೀನುಗಳಿಗೆ ಒಳ್ಳೆಯ ಬೆಲೆ ನಿರೀಕ್ಷಿಸಿದ ಜನ ಹೇಗಾದರೂ ಮಾಡಿ ಆಕ್ಕಪಕ್ಕದ ನೆಲದ ತುಂಡುಗಳನ್ನು ಕೊಳ್ಳತೊಡಗಿದರು. ಆಮೂಲಾಗ್ರವಾಗಿ ಮತ್ತು ನಿಷ್ಠೆಯಿಂದ ಭೂ ಸುಧಾರಣೆಗಳನ್ನು ಇನ್ನೂ ಜಾರಿಗೆ ತಂದಿಲ್ಲದ ಸಂದರ್ಭದಲ್ಲಿ ನೀಡಲಾದ ಜುಜುಬಿ ಪರಿಹಾರ ಧನವನ್ನೂ ಭೂಮಾಲಿಕ ಕಸಿದುಕೊಂಡು ಗೇಣಿದಾರನ ಬಾಯಿಗೆ ಮಣ್ಣು ಬಿತ್ತು. ಮಧ್ಯ ವಯಸ್ಕರಾದ ರೈತರೂ ಅವರ ಹೆಂಗಸರೂ ಹೊಸ ಕಂಟ್ರಾಕ್ಟರುಗಳ ಕೈಯ್ಯಡಿಗೆ ದಿನಕೂಲಿ ಮಾಡಿ ರೂಢಿಯಿಲ್ಲದೆ ತಮಗಿದ್ದ ಒಂದೇ ಜೀವನಮಾರ್ಗವನ್ನೂ ಕಳೆದುಕೊಂಡರು. ಹಳ್ಳಿಗಳ ಕರಕುಶಲಿಗರೂ, ಎಲ್ಲಕ್ಕಿಂತ ಹೆಚ್ಚಾಗಿ ಭೂಮಿರಹಿತ ಕಾರ್ಮಿಕರೂ ಇಂಥದೇ ಗತಿಗೆ ಈಡಾದರು. ಹಳ್ಳಿಗಾಡಿನ ಜನರೆಲ್ಲ, ಆಧುನಿಕ ಉದ್ಯಮಕ್ಕೆ ಅತ್ಯವಶ್ಯಕವಾದ ತಂತ್ರನೈಪುಣ್ಯವಿಲ್ಲದೆ ಅಕುಶಲ ಕಾರ್ಮಿಕರಾಗಿ, ನಾಟಿ ಅಥವಾ ವರ್ತನೆ ಕೂಲಿಗಳಾಗಿ ದುಡಿಯಬೇಕಾಗಿ ಬಂತು. ಅನೇಕ ಬಾರಿ ತಮ್ಮ ಪರಿಸರಕ್ಕೆ ದಾಳಿ ಇಟ್ಟ ಹೊಸ ನವಾಬರ ವಿಕೃತ ಚೇಷ್ಟೆ, ತೆವಲುಗಳಿಗೆ ಹಳ್ಳಿಯ ಮುಗ್ಧ ಹೆಂಗಸರು ಬಲಿಯಾದರು. ಹಳ್ಳಿಯ

ಜನರಿಗೆ ಹೊಸ ಉದ್ಯೋಗಗಳಲ್ಲಿ ತಯಾರಿನೀಡಿ ಮರು ವ್ಯವಸ್ಥೆಮಾಡುವ ಕೆಲಸ ಒಟ್ಟು ಪ್ರದೇಶದ ಸಮಗ್ರ ಅಭಿವೃದ್ಧಿಯ ಅಂಗ ಎನ್ನುವುದು ಯಾರಿಗೂ ಬೇಡದ ಮಾತಾಗಿತ್ತು. ಸ್ವಂತಲದ ನೆಲೆ ಇಲ್ಲದೆ ಒಂದಕ್ಕೊಂದು ತಾಕಲಾಡುವ ಪರ್ಯಾಯ ಸಮಾಜಗಳು ಇಲ್ಲಿ ಹುಟ್ಟಿದವು. ಬೇರೆಯೇ ನೆಲೆಯೊಂದರಿಂದ ಬಂದ ಅಧಿಕಾರಿಗಳು ಮತ್ತು ಕೆಲಸಗಾರರು ತಮ್ಮ ನಡುವೆಯೇ ಉತ್ತಮ ಜನಾಂಗದವರ ಹಾಗೆ ತಳ ವೂರುತ್ತಿರುವುದನ್ನು ಹಳ್ಳಿಯಜನರು ನಿಸ್ಸಹಾಯಕರಾಗಿ ನೋಡಬೇಕಾಯಿತು. ಹೀಗೆ ಉದ್ಭವಿಸಿದ ಹೊಸಪಟ್ಟಣಗಳ ಮತ್ತು ಅವುಗಳ ಸುತ್ತಲ ಜನರ ಜೀವನ ಸ್ಥಿತಿಗಳ ನಡುವಿನ ವ್ಯತ್ಯಾಸವು ಗೆರೆಯೆಳೆದಷ್ಟು ಸ್ಪಷ್ಟವಾಗಿಎದ್ದು ತೋರುತ್ತಿದೆ. ಈ ಮಂಡಲದ ಆಚೆ ಸ್ಥಿತಿವಂತನಾದ ರೈತನಿಗೂ ಶುದ್ಧವಾದ ಕುಡಿವ ನೀರು ದೊರಕುವುದಿಲ್ಲ; ಆದರೆ ಕಾಲೋನಿಗಳ ಜನರು ಶುದ್ಧ ನೀರನ್ನು ಕುಡಿದು ಹೆಮ್ಮೆಪಡುತ್ತಿದ್ದರು. ಹಾಗೆಂದರೆ, ಈ ಹೊಸ ಕಾಲೋನಿಗಳಲ್ಲಿ ಹಾಲುಜೇನು ಸುರಿಯುತ್ತಿತ್ತೆಂದು ಹೇಳುತ್ತಿಲ್ಲ. ಇವೆರಡೂ ' ಲೋಕ ' ಗಳ ನಡುವೆ ಕನಿಷ್ಠ ಅಗತ್ಯಗಳ ಪೂರೈಕೆಯಲ್ಲೂ ಸಹ ಗಮನಾರ್ಹ ಅಸಮಾನತೆ ಇತ್ತೆಂಬುದನ್ನು ಅಲ್ಲಗಳೆಯಲಾಗದು.

ಈ ಉದ್ಯಮೀಕರಣದ ಫಲವಾಗಿ ಕೆಲವು ಹಳ್ಳಿಗಳಲ್ಲಿ ಹಣ ಓಡಾಡತೊಡಗಿತ್ತು. ಕೆಲವು ಹಳ್ಳಿಗರು ಹೊಸ ನೌಕರಿಗಳನ್ನು ದಕ್ಕಿಸಿಕೊಂಡರು ; ಹಳ್ಳಿಗಳ ಉತ್ಪನ್ನಗಳು ತಮ್ಮ ಮನೆಗೆ ಬಾಗಿಲಿಗೆ ಬಂದ ಹೊಸ ಮಾರುಕಟ್ಟೆಯನ್ನು ಪ್ರವೇಶಿಸಿದವು ; ಇವೆಲ್ಲ ನಿಜವೇ. ವಿಶೇಷವಾಗಿ–ವ್ಯವಸಾಯಆಧಾರಿತ ಉದ್ಯಮಗಳು ಆರಂಭವಾದ ಕಡೆಗಳಲ್ಲಿ ಕೆಲವು ಹಳ್ಳಿಗರಾದರೂ ಸಿರಿವಂತರಾದರು ಕೂಡ. ಹೊಸ ಉದ್ಯಮ ಅಥವಾ ಯೋಜನಾಕಾರ್ಯವು ಕೇಂದ್ರ ಶಕ್ತಿಯಾಗಿ ಆಧುನೀಕರಣವನ್ನು ಪ್ರಚೋದಿಸಿ ಜಾತಿ ಮತ ಮತ್ತು ಪ್ರದೇಶದ ಗೋಡೆಗಳನ್ನು ಸಡಿಲಗೊಳಿಸಿದ್ದನ್ನು ಅಲಕ್ಷಿಸಿ ಮೇಲಿನ ಮಾತುಗಳನ್ನು ಹೇಳುತ್ತಿಲ್ಲ. ಆದರೂ ಕಾಲೋನಿಗರ ಮತ್ತು ಹಳ್ಳಿಗರ ನಡುವೆ ಲಾಭದ ತಕ್ಕಡಿಯು ಕಾಲೋನಿಗರ ಕಡೆಗೇ ತೂಗಿ ಹಳ್ಳಿಗರು ಪರಸ್ಪರ ಸಂಬಂಧಗಳ ಲೆಕ್ಕದಲ್ಲಿ ಎರಡನೆ ದರ್ಜೆ ಪ್ರಜೆಗಳಾದರು, ಕಾಲೋನಿಗರ ಆಳ್ವಿಕೆಗೆ ಒಳಪಟ್ಟರು.

ಸರಕಾರದ ಅರಿವಿಗೆ ಬಂದ ಹಳ್ಳಿಗಳ ಜನರು ಅನುಭವಿಸಿದ ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಳ್ಳುವಲ್ಲಿ ಆದ ಸಾಧನೆ ಶೂನ್ಯ. ಈ ಸಮಸ್ಯೆಗಳನ್ನು ಹಳ್ಳಿಗರ ದೃಷ್ಟಿಕೋನದಿಂದ ಗಮನಿಸಿರದ ಪ್ರಯುಕ್ತ ಬಹುಪಾಲು ತಜ್ಞರು ಈ ಬಗ್ಗೆ ನೀಡಿದ ಗಮನ ಅತ್ಯಲ್ಪ. ಕೆಲವು ತಜ್ಞರನ್ನು ಬಿಟ್ಟರೆ ಬೇರೆ ಎಲ್ಲರೂ ಈ ಪರಿಸ್ಥಿತಿಯನ್ನು ಟೆಲಿಸ್ಕೋಪಿನ ತಪ್ಪುತುದಿಯಿಂದ ಗಮನಿಸಿದ್ದಾರೆ ಎನ್ನುವುದು ಖಚಿತ. ಹಳ್ಳಿಗಳ ಜನರಲ್ಲಿ ಸಂಘಟನೆಯನ್ನೂ ಅರಿವನ್ನೂ ಮೂಡಿಸಬಲ್ಲವರಾಗಿದ್ದ ಈ ಹೊಸ ಉದ್ಯಮ ಅಥವಾ ಯೋಜನಾಕಾರ್ಯಗಳ ಸಂಘಟಿತ ಕಾರ್ಮಿಕರು ದುರದೃಷ್ಟವಶಾತ್ ತಮ್ಮ ಈ

ನ್ಯಾಯಬದ್ಧ ಜವಾಬ್ದಾರಿಯನ್ನು ನಿರ್ವಹಿಸದೆ ಸುತ್ತಲ ಸನ್ನಿವೇಶದಿಂದ ಸಾಧ್ಯವಾದಷ್ಟು ದೂರವೇ ಉಳಿಯುವುದರಲ್ಲಿ ತೃಪ್ತರಾದರು.

ಈಗ, ಹಳ್ಳಿಯ ಸಮಾಜದ—ವಿಶೇಷವಾಗಿ ಬಡರೈತರ ಪ್ರತಿನಿಧಿಗಳು, ಕಾರ್ಮಿಕ ಮುಖಂಡರು, ಆಡಳಿತಾಧಿಕಾರಿಗಳು ಮತ್ತು ಬಹುಮುಖ್ಯವಾಗಿ ಸಮಾಜಶಾಸ್ತ್ರಜ್ಞರ ಜೊತೆಗೆ ಚರ್ಚಿಸಿ ಈ ಎಲ್ಲ ಸಂಗತಿಗಳ ಬಗ್ಗೆ ದೃಢವಾದ ಮಾರ್ಗಸೂಚಿಯನ್ನು ರೂಪಿಸುವುದು ಸರಕಾರ ಮಾಡಬೇಕಾದ ಅತ್ಯಗತ್ಯವಾದ ಕಾರ್ಯ. ಎಲ್ಲೆಲ್ಲಿ ಸಮಸ್ಯೆಗಳು ಉಲ್ಬಣಿಸಿವೆಯೋ ಅಲ್ಲೆಲ್ಲ ತಕ್ಷಣ ಚಿಕಿತ್ಸಕ ಕ್ರಮಗಳನ್ನು ಕೈಗೊಳ್ಳುವುದು ಸಹ ಅಗತ್ಯ.

ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗೀ ಕ್ಷೇತ್ರಗಳ ಬೆರಳೆಣಿಕೆಯಷ್ಟು ಉದ್ಯಮಗಳು ಮಾತ್ರ ಹಳ್ಳಿಗಾಡಿನಲ್ಲಿ ಕೆಲವು ಕಲ್ಯಾಣಕಾರೀ ಸುಧಾರಕ ಕ್ರಮಗಳನ್ನು ಕೈಗೊಳ್ಳುವ ಪ್ರಯತ್ನಗಳಲ್ಲಿ ತೊಡಗಿವೆ. ದೃಢವಾದ ಸರ್ವಾಂಗೀಣ ಚೌಕಟ್ಟು ಮತ್ತು ಸ್ಪಷ್ಟವಾದ ದಿಕ್ಕಿಲ್ಲದೆ ಇಂಥ ಕಾರ್ಯಕ್ರಮಗಳು ತಾತ್ಕಾಲಿಕ ಆಧಾರಗಳನ್ನು ಮಾತ್ರ ಹೊಂದಿವೆ. ಕೆಲವು ಬಾರಿ, ಇಂಥ ಚಟುವಟಿಕೆಗಳ ಚಾಲಕಶಕ್ತಿಯು ಹಳ್ಳಿಯ ಪ್ರವಾಹದಲ್ಲಿ ಕಾರ್ಖಾನೆಗಳ ಧನಿಕರನ್ನು ತರುವುದರಿಂದ ಬಡ ಹಳ್ಳಿಗರಲ್ಲಿ ಉಂಟಾಗುವ ಕಿರಿಕಿರಿಯನ್ನು ಉಪಶಮಿಸುವ ಜನಸಂಪರ್ಕದ ಆಶಯ. ಯಾವುದೇ ಉದ್ಯಮ ತನ್ನ ಉತ್ಪನ್ನವನ್ನು ಹಳ್ಳಿಗಳಲ್ಲಿ ಮುಂದೆ ತರುವ ಉದ್ದೇಶದಿಂದ ಇಂಥ ಕಾರ್ಯಗಳನ್ನು ಕೈಗೊಳ್ಳಲು ಪ್ರಚೋದಿತವಾದೀತು. ಅಥವಾ ಇದು ಕೆಲವು ಜನಕಲ್ಯಾಣ ಚಟುವಟಿಕೆಗಳನ್ನು ನಡೆಸುವ ಬರೀ ಸಮಾಜಸೇವೆಯ ಗುರಿಯಷ್ಟೇ ಇರಬಹುದು. ಆಧುನಿಕತೆಯನ್ನು ಹಳ್ಳಿಗೆ ತರುವುದು, ಸಾಮುದಾಯಿಕ ವಾಣಿಜ್ಯ, ಸಂಯುಕ್ತ ಕ್ಷೇತ್ರವನ್ನು ಹಳ್ಳಿಯ ಏಳಿಗೆಯಲ್ಲಿ ಪಾಲ್ಗೊಳಿಸುವುದು, ಸಾಮುದಾಯಿಕ ಬಂಡವಾಳ ಹೂಡಿಕೆ ಇಂಥ ಹಲಕೆಲವು ಸಲಹೆಗಳನ್ನು ಪರಿಣತರು ಸೂಚಿಸಿದ್ದರೂ ಸಾಮಾಜಿಕ ಹೊಣೆಗಾರಿಕೆಯ ಉತ್ತೇಜನ ಮತ್ತು ಸಮಗ್ರ ಅಭಿವೃದ್ಧಿಯ ತತ್ತ್ವಗಳು ಈ ಸಲಹೆಗಳಲ್ಲಿಲ್ಲ. ಉದ್ಯಮ ಅಥವಾ ಯೋಜನಾಕಾರ್ಯಗಳು ಹಳ್ಳಿಗಳ ಏಳಿಗೆಗೆ ಸಹಕರಿಸಲು ಬೇಕಾದ ಸಾಮರ್ಥ್ಯ ಹಾಗೂ ಪರಿಣತಿ ಹೊಂದಿರುವುದರಿಂದ ಅವುಗಳು ಸಾಕಷ್ಟು ಕೆಲಸಮಾಡಬಹುದು. ಕೆಲಬಾರಿ ಸಣ್ಣಪ್ರಮಾಣದ ಉದ್ಯಮಗಳೋ ಯೋಜನಾಕಾರ್ಯಗಳೋ ಇದ್ದಾಗ ಅಂಥ ಕೆಲವನ್ನು ಸೇರಿಸಿದ ಸಮಿತಿಗಳನ್ನು ರಚಿಸಿ ಇಂಥ ಕಾರ್ಯಕ್ಕೆ ತೊಡಗಿಸಬಹುದು.

ಯೋಜನಾಕಾರ್ಯ ಅಥವಾ ಉದ್ಯಮವು ಹುಟ್ಟಿಕೊಂಡ ಪ್ರದೇಶ (ಇದನ್ನು ನಿರ್ದಿಷ್ಟವಾಗಿ ಗುರುತಿಸಿ)ದ ಅಭಿವೃದ್ಧಿಯನ್ನು ಈ ಯೋಜನಾಕಾರ್ಯ ಅಥವಾ

ಉದ್ಯಮದ ಮುಖ್ಯ ಮತ್ತು ಅಭಿನ್ನ ಗುರಿಗಳಲ್ಲೊಂದು ಎಂದು ಸ್ಥಾಪನೆಯ ಕಾಲದಲ್ಲೇ ನಿರ್ವಚಿಸಬೇಕು. ಈ ಪ್ರದೇಶವನ್ನು ಯೋಜನಾಕಾರ್ಯ ಅಥವಾ ಉದ್ಯಮವು ಕೇಂದ್ರವಾಗಿರುವ ಸುತ್ತಲಿನ ಗ್ರಾಮೀಣ ಪ್ರದೇಶ ಎಂದು ನಿರ್ದಿಷ್ಟಪಡಿಸಬಹುದು. ಉದ್ಯಮ ಅಥವಾ ಯೋಜನಾಕಾರ್ಯವನ್ನು ಅದು ಹುಟ್ಟಿಕೊಂಡ ಪ್ರದೇಶದ ಸಮಗ್ರ ಅಭಿವೃದ್ಧಿಯ ಪ್ರಯತ್ನ ಎಂದು ಪರಿಗಣಿಸಬೇಕು. ಸಾಧ್ಯವಾದಷ್ಟು ರೈತರ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿಯೇ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳಬೇಕಾದುದು ಅಗತ್ಯ. ಅಲ್ಲದೆ ಪರಿಹಾರದ ದರಗಳು ನ್ಯಾಯಯುತವಾಗಿರಬೇಕು. ಪರಿಹಾರವನ್ನು ಕೊಡುವವರೆಗೂ ಭೂಮಿಯನ್ನು ವಶಪಡಿಸಿಕೊಳ್ಳುವುದು ಸಲ್ಲದು. ಹಳ್ಳಿಗಳ ಮುಳುಗಡೆಯಾದಾಗ ಅಥವಾ ಖಾಲಿ ಮಾಡಿಸುವ ಅಗತ್ಯ ಬಂದಾಗ ಹಳ್ಳಿಯ ಜನರಿಗೆ ಮರು ವ್ಯವಸ್ಥೆ ಮಾಡುವ ಜವಾಬ್ದಾರಿಯನ್ನು ಆಯಾ ಉದ್ಯಮ ಅಥವಾ ಯೋಜನಾಕಾರ್ಯ ಹೊರಬೇಕು. ಇದರಿಂದ ಜೀವನೋಪಾಯವನ್ನು ಕಳೆದುಕೊಳ್ಳುವ ಜನರಿಗೆ ಬದಲಿ ಜೀವನೋಪಾಯಗಳನ್ನು ಹಳ್ಳಿಯ ಜನಗಳ ಪ್ರತಿನಿಧಿಗಳೊಡನೆ ಸಮಾಲೋಚಿಸಿ ಕಲ್ಪಿಸಿಕೊಡಬೇಕು. ಸ್ಥಳಾಂತರಗೊಂಡ ಹಳ್ಳಿಗರಿಗೆ ಅಲ್ಲಿ ಆರಂಭವಾದ ಉದ್ಯಮದಲ್ಲಿ ಅಥವಾ ಅದರ ಸಹ ಉದ್ಯಮಗಳಲ್ಲಿ ನೌಕರಿ ಭರ್ತಿಮಾಡಿಕೊಳ್ಳುವಾಗ ಆದ್ಯತೆ ಕೊಡಬೇಕು. ಆದಷ್ಟು ಬೇಗ ಆ ಜಾಗದಲ್ಲಿ ಕಿರಿಯ ತಾಂತ್ರಿಕ ಶಾಲೆಗಳನ್ನು ಸ್ಥಾಪಿಸಿ ಹಳ್ಳಿಯ ಹುಡುಗ ಹುಡುಗಿಯರಿಗೆ ತಾಂತ್ರಿಕ ತರಬೇತಿ ನೀಡಿ ಉದ್ಯೋಗಕ್ಕೆ ಅಣಿಮಾಡಬೇಕು. ಉದ್ಯಮವು ನೆಲೆಗೊಂಡ ಭೌಗೋಳಿಕ ಪರಿಸರದ ಜನರಿಗೆ ನೌಕರಿಯಲ್ಲಿ ಆದ್ಯತೆ ನೀಡಿದರೆ " ಮಣ್ಣಿನ ಮಕ್ಕಳ " ವಾದದ ಮೂಲಕ ಪ್ರಕಟವಾಗುತ್ತಿರುವ ಪ್ರದೇಶಾಂಧತೆಯು ಈಗ ಹರಡುತ್ತಿರುವಷ್ಟು ವಿಷ ಹರಡುವುದಿಲ್ಲ.

ನಿರ್ಮಾಣಗಳಲ್ಲಿ ಕೆಲಸಮಾಡುವ ವಲಸೆಕೂಲಿಗಳು, ನಾಟಿ ಕೂಲಿಗಳು, ಸಾಮಯಿಕ ಕೂಲಿಗಳು ವರ್ತನೆ ಕೂಲಿಗಳು, ಮತ್ತು ಸಹ ಉದ್ಯಮಗಳ ಕಾರ್ಮಿಕರಿಗೆ ಕೊಡಬೇಕಾದ ಕೂಲಿ ದರಗಳನ್ನು ನಿಖರವಾಗಿ ನಿರ್ಧರಿಸಿ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಸ್ಥಾನಾಂತರಗೊಳ್ಳುವ ಜನರ ಕಲ್ಯಾಣ ಮತ್ತು ಪುನರ್ವ್ಯವಸ್ಥೆಗೆ ಮತ್ತು ಉದ್ಯಮ ಯೋಜನಾಕಾರ್ಯ ಹಾಗೂ ಸಹ ಉದ್ಯಮಗಳಲ್ಲಿ ಕೆಲಸಮಾಡುವ ಎಲ್ಲ ಬಗೆಯ ಕೆಲಸಗಾರರ ಜೀವನದ ಮತ್ತು ಸೇವಾ ಪರಿಸ್ಥಿತಿಯ ಉಸ್ತುವಾರಿಗೆ ಸೂಕ್ತವಾದ ಒಂದು ಮಾರ್ಗೋಪಾಯವನ್ನು ರೂಪಿಸಬೇಕು. ಸ್ಥಾನಾಂತರಗೊಂಡ ಹಳ್ಳಿಗರಲ್ಲಿ ನಾಟಿ ಮತ್ತು ಹೆಣ್ಣು ಕೂಲಿಗಳ ಪರಿಸ್ಥಿತಿಯ ಬಗ್ಗೆ ವಿಶೇಷ ಗಮನಕೊಡಬೇಕು.

ಹಿಂದುಳಿದ ಪ್ರದೇಶಗಳಲ್ಲಿ ಆರಂಭವಾದ ಉದ್ಯಮ ಅಥವಾ ಯೋಜನಾ ಕಾರ್ಯವು ತನ್ನ ಸುತ್ತಲಿನ ಹಳ್ಳಿಗಾಡನ್ನು ಬೆಳೆಸುವುದಕ್ಕೆ ಸಹಕರಿಸುವ ಸಾಮಾಜಿಕ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳಬೇಕು. ಈ ಹೊಣೆಗಾರಿಕೆಯನ್ನು ಪೂರೈಸಲು ಕಾರ್ಮಿಕಸಂಘದ ಸಹಕಾರವನ್ನು ಪಡೆಯುವುದು ಅತ್ಯವಶ್ಯ. ಹಳ್ಳಿಗರಲ್ಲಿ ದುರ್ಬಲ

ವರ್ಗಗಳಿಗೆ ಈ ಕಾರ್ಯದ ಲಾಭಗಳು ದೊರಕುವಂತೆ ಈ ಸಾಮಾಜಿಕ ಹೊಣೆಗಾರಿಕೆಯು ನಿರ್ವಹಿತವಾಗಬೇಕು. ಹಿಂದಿನಕಾಲದಲ್ಲಿ ಯಾವುದೇ ಉದ್ಯಮ ತನ್ನ ನಿವ್ವಳಲಾಭದ ಒಂದಂಶವನ್ನು ದಾನ ಎಂದು ಹೇಳಲಾದ ಪಾಳೆಯಗಾರಿ ಮೌಲ್ಯವೊಂದಕ್ಕೆ ತೆಗೆದಿರಿಸುತ್ತಿದ್ದ ಹಾಗೆಯೆ ಈಗಿನ ಉದ್ಯಮಗಳು ಅಥವಾ ಯೋಜನಾಕಾರ್ಯಗಳು ಅಗತ್ಯವಿದ್ದರೆ ನಿಯಮಾವಳಿಗಳನ್ನು ತಿದ್ದುವ ಮೂಲಕ ಸಾಮಾಜಿಕ ಹೊಣೆಗಾರಿಕೆಯ ನಿಧಿಯನ್ನು ತನ್ನ ನಿವ್ವಳ ಲಾಭದ ಒಂದಂಶವನ್ನು ತೆಗೆದಿರಿಸುವ ಮೂಲಕ ಶೇಖರಿಸಬೇಕು. ದೇಶದ ಇಡೀ ದುಡಿಮೆಗಾರ ವರ್ಗವೂ ಐಚ್ಛಿಕವಾಗಿ ತನ್ನ ಸಾಂಕೇತಿಕ ಕೊಡುಗೆಯನ್ನು ಇಂತಹ ನಿಧಿಗೆ ಕೂಡಿಸುವಂತೆ ಅದರ ರಾಷ್ಟ್ರೀಯ ಸಂಘಟನೆಗಳ ಮನವೊಲಿಸಿ ಪ್ರಾರ್ಥಿಸಬಹುದು ಎಂಬುದು ನನ್ನ ಸಲಹೆ. ಇಂಥ ಸಾಂಕೇತಿಕ ಕೊಡುಗೆಯು ಸಂಘಟಿತ ಕಾರ್ಮಿಕರು ಹಳ್ಳಿಯ ಬಡ ಜನರೊಡನೆ ನಿಜವಾದ ಅರ್ಥದಲ್ಲಿ ಸೋದರಭಾವವನ್ನು ಬೆಳೆಸಿಕೊಳ್ಳಲು ಸಹಕಾರಿಯಾದೀತು. ಉದ್ಯಮ ಅಥವಾ ಯೋಜನಾಕಾರ್ಯದ ಅಧಿಕಾರವರ್ಗ ಮತ್ತು ಕಾರ್ಮಿಕ ವರ್ಗಗಳ ಮೇಲೆ ನಿರ್ದಿಷ್ಟ ಗ್ರಾಮೀಣ ಪ್ರದೇಶದ ಅಭಿವೃದ್ಧಿಯ ಜಂಟಿ ಹೊಣೆಗಾರಿಕೆ ಇರುತ್ತದೆ. ಅವು ತಮ್ಮ ಪ್ರದೇಶದ ಹಳ್ಳಿಗಳ ಬೆಳವಣಿಗೆಗೆ ತಾವೂ ಹೇಗೆ ಪಾಲುಗೂಡಿಸಬಹುದೆಂಬ ಬಗ್ಗೆ ಮಾಹಿತಿ ಸಂಗ್ರಹಿಸಿ, ಹಳ್ಳಿಗರೊಡನೆ ಮಾತುಕತೆಗಳಿಂದ ಅವರ ತುರ್ತು ಅಗತ್ಯಗಳ ಬಗ್ಗೆ ಅಭಿಪ್ರಾಯ ಸಂಗ್ರಹಿಸಿ, ಇಂಥ ಅಗತ್ಯಗಳ ಒಂದು ಪಟ್ಟಿಯನ್ನು ಮಾಡಬೇಕಾಗುತ್ತದೆ.

ಹಳ್ಳಿಯ ಜನರು, ಕಾರ್ಮಿಕ ಸಂಘಗಳು ಮತ್ತು ಅಧಿಕಾರ ವರ್ಗಗಳು ಜೊತೆಸೇರಿ ಇಂಥ ಪಟ್ಟಿಯನ್ನು ಮಾಡಿದ ಬಳಿಕ ಅಧಿಕಾರವರ್ಗವು ಒಂದು ಸ್ವತಂತ್ರ ಕಾರ್ಯಾಂಗದ ಮೂಲಕ ಆ ಪಟ್ಟಿಯ ಅಗತ್ಯಗಳನ್ನು ಪೂರೈಸಲು ಬೇಕಾದ ಪರಿಣತಿ ಮತ್ತು ಕೆಲಸಗಾರರನ್ನು ಒದಗಿಸಬೇಕು. ಹಳ್ಳಿಯ ಜನರು ಕಾರ್ಮಿಕ ಸಂಘಗಳು ಮತ್ತು ಅಧಿಕಾರ ವರ್ಗಗಳ ಪ್ರತಿನಿಧಿಗಳು ನಿರಂತರವಾಗಿ ಸಂಧಿಸಿ ನಡೆಸಲಾದ ಕೆಲಸಗಳ ಬಗ್ಗೆ ಮೌಲ್ಯಾಂಕನವನ್ನು ಮಾಡಬೇಕು. ಕೆಲಸಮಾಡುತ್ತಿರುವ ಗ್ರಾಮಪಂಚಾಯಿತಿ, ಜಿಲ್ಲಾ ಪರಿಷತ್ತು, ಪ್ರದೇಶಾಭಿವೃದ್ಧಿ ಮಂಡಳಿಗಳಂತಹ ಸಂಸ್ಥೆಗಳು ಇರುವಂತಹ ಸ್ಥಳಗಳಲ್ಲಿ ಈ ಕಾರ್ಯದಲ್ಲಿ ಈ ಸಂಸ್ಥೆಗಳನ್ನೂ ಸಹ ತೊಡಗಿಸಿಕೊಳ್ಳುವುದು ಸೂಕ್ತ. ಆದರೂ, ಸಾಂಸ್ಥಿಕ ಸುಧಾರಣೆಗಳಾಗದೆ ಮತ್ತು ಬಡ ಹಳ್ಳಿಗರ ಸಂಘಟನೆಗಳನ್ನು ಸೃಷ್ಟಿಸದೆ ಕಲ್ಯಾಣ ಕಾರ್ಯಕ್ರಮಗಳಿಗೆ ಮತ್ತು ಬೆಳವಣಿಗೆಯ ಚಟುವಟಿಕೆಗಳಿಗೆ ಸುರಿಯಲಾಗುವ ಹಣವು ಬಡ ಹಳ್ಳಿಗರಿಗೆ ಯಾವ ಪ್ರಯೋಜನಕ್ಕೂ ಬರುವುದಿಲ್ಲ ಎಂದು ಕೆಲವು ಅಧ್ಯಯನಗಳು ತೋರಿಸಿವೆ. ನಿದರ್ಶನ ಕೊಡುವುದಾದರೆ, ಭೂಸುಧಾರಣೆ ಕೈಕೊಳ್ಳದೆ ಬೇಸಾಯಗಾರರಿಗೆ ಬೇಸಾಯಕ್ಕೆ ಬೇಕಾದ ಸಾಮಗ್ರಿಗಳನ್ನು ಕೊಡುವುದು ಭೂಮಾಲಿಕರು ಈ ಸಾಮಗ್ರಿಗಳನ್ನು ಕೊಳ್ಳೆ ಹೊಡೆಯುವುದರಲ್ಲಿ ಪರ್ಯವಸಾನವಾಗುತ್ತದೆ. ಕುಟುಂಬದ ಆದಾಯಕ್ಕೆ ತಮ್ಮ ಘನಿಗೂಡಿಸಲು ಮಕ್ಕಳು ದುಡಿಯಲೇಬೇಕಾಗಿ ಬರುವ

ಅನಿವಾರ್ಯ ಪರಿಸ್ಥಿತಿಯನ್ನು ಹೋಗಲಾಡಿಸದೇ ಹೆಚ್ಚು ಹೆಚ್ಚು ಶಾಲೆಗಳನ್ನು ನಿರ್ಮಿಸುವುದು ಸಾಕ್ಷರತೆಯ ಹೆಚ್ಚಳಕ್ಕೆ ಸಹಾಯಕವಾಗುವುದಿಲ್ಲ. ಆದ್ದರಿಂದ, ಉದ್ಯಮವೋ ಯೋಜನಾಕಾರ್ಯವೋ ಮಾಡುವ ಕೆಲಸಕ್ಕೆ ವಿಶಾಲವಾದ ಕ್ರಮಗಳ ಹಿಂಬಾಲಿಕೆಯೂ ಸಹ ಇರಬೇಕು. ಮುಖ್ಯ ಉದ್ದೇಶ ಏನೆಂದರೆ : ಒಂದು ನಿರ್ದಿಷ್ಟ ಪ್ರದೇಶವನ್ನು ಅಲ್ಲಿನ ಹಳ್ಳಿಗರ ಹಾಗೂ ಕಾಲೋನಿಗರ ಜೀವನಸ್ಥಿತಿಯ ನಡುವಿನ ಮತ್ತು ಹಳ್ಳಿಗಳ ವಿವಿಧ ವರ್ಗಗಳ ನಡುವಿನ ಜೀವನಸ್ಥಿತಿಯ ಅಂತರವು ಕಡಿಮೆಯಾಗುವಂತೆ, ಉದ್ಯೋಗಾವಕಾಶ, ತರಬೇತಿ ಮತ್ತು ಸೌಲಭ್ಯಗಳನ್ನು ನೀಡುವ ಮೂಲಕ ಬೆಳೆಸುವುದು. ಹೀಗೆ ಕೈಗೊಳ್ಳಲು ಸಾಧ್ಯವಾಗುವ ಕೆಲವು ಕಾರ್ಯಕ್ರಮಗಳನ್ನು ಕೆಳಗೆ ಸೂಚಿಸಿದ್ದೇನೆ. ಅಗತ್ಯ ಮತ್ತು ಹಣದ ಒದಗುವಿಕೆಯನ್ನು ಆಧರಿಸಿ ಒಂದು ಅಥವಾ ಹೆಚ್ಚು ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು ;

1. ವಯಸ್ಕಶಿಕ್ಷಣ ಮತ್ತು ಉದ್ಯೋಗ ತರಬೇತಿ ಶಾಲೆಗಳೂ ಸೇರಿದಂತೆ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ ಮತ್ತು ಮೇಲ್ವಿಚಾರಣೆ.

2. ಸಂಚಾರೀ ಆಸ್ಪತ್ರೆ ಮತ್ತು ಕುಟುಂಬ ಕಲ್ಯಾಣಗಳೂ ಸೇರಿದಂತೆ ಆರೋಗ್ಯ ಸೇವೆಗಳ ಸ್ಥಾಪನೆ ಮತ್ತು ಮೇಲ್ವಿಚಾರಣೆ.

3. ತಂತ್ರಜ್ಞಾನವನ್ನು ಒದಗಿಸುವುದರ ಜೊತೆಗೆ ಹಳ್ಳಿಯ ಅಭಿವೃದ್ಧಿಗೆ ಬೇಕಾದ ಸಾಮಗ್ರಿಗಳ ಪೂರೈಕೆಗೆ ವ್ಯವಸ್ಥೆ.

4. ಹಳ್ಳಿಗಾಡಿನಲ್ಲಿ ತಳರಚನೆಯ ಕಾರ್ಯಗಳನ್ನು ಆರಂಭಿಸುವುದು ಮತ್ತು ಮುಂದುವರೆಸುವುದು.